## ಅವ್ರನ್ನೂ ಕರ್ಕೊಂಡು ತುಂಬ್ರೀ...!

ಬಿಜಾಪುರದ ನಗರದಲ್ಲಿ ಕೆಲಸ ಮಾಡುತ್ತಿದ್ದ ಶೀನಿಯ ಮನೆಯ ಬೀದಿಯಲ್ಲೇ ಆತನ ಸಹಾಯಕನ ಮನೆ ಇತ್ತು. ಅದೊಂದು ದಿನ ಶೀನಿಯ ಕಚೇರಿ ಜೀಪು ರಿಪೇರಿಗೆ ಕೊಟ್ಟಿದ್ದರಿಂದ ಮಧ್ಯಾಹ್ನದ ಊಟ ಮಾಡಿ ಬರಲು ತನಗೆ ಡ್ರಾಪ್ ಕೊಡುವಂತೆ ಶೀನಿ, ಸಹಾಯಕನಿಗೆ ಕೇಳಿದ್ದ. ಅದರಂತೆ ಆತ ತನ್ನ ಸ್ಕೂಟರ್ ಮೇಲೆ ಶೀನಿಯನ್ನು ಮನೆಗೆ ಬಿಟ್ಟು ಬಂದಿದ್ದ.

ಅರ್ಧ ಗಂಟೆ ನಂತರ ಮತ್ತೆ ಶೀನಿ ಸಹಾಯಕನ ಮನೆಗೆ ಬಂದಾಗ ಆತ, 'ಒಂದೈದು ಮಿನಿಟ್ ಕೂತೀರೀ ಈಗ ಬಂದೆ' ಎಂದು ಒಳಗೆ ಹೊಗಿದ್ದ. ಆಗ ಆತನ ಅರ್ಧಾಂಗಿ ರೂಮಿನಿಂದಲೇ ತನ್ನ ಪತಿಗೆ, 'ರ್ರೀ.. ನಳಾ ಬಂದಾವ ನೀರು ತುಂಬಿ ಇಟ್ಟು ಹೋಗ್ರಿ.. ನನಗ ಯಾಕೋ ಸೊಂಟ ನೋಯ್ತಾ ಇದೆ' ಎಂದು ಹೇಳುತ್ತಿರುವುದು, ಅದಕ್ಕೆ ಪ್ರತಿಯಾಗಿ ಆಕೆಯ ಪತಿ, 'ಏಯ್ ಸುಮ್ನಿರು ಅಲ್ಲಿ ನಮ್ಮ ಸಾಹೇಬ್ರು ಬಂದ ಕೂತಾರ' ಎಂದು ಹೇಳಿದಾಗ ಆಕೆ, ಅದೇ ಸ್ವರದಲ್ಲಿ 'ಅದಕ್ಕೇನಂತ ಅವ್ರನ್ನೂ ಕರ್ಕೊಂಡು ತುಂಬ್ರೀ..' ಎನ್ನುವ ಮಾತು ಶೀನಿ ಕಿವಿ ಮೇಲೆ ಬೀಳುತ್ತಿದ್ದಂತೆ ಸದ್ದಿಲ್ಲದೇ ಆ ಬಿಸಿಲಲ್ಲಿ ಕಚೇರಿಗೆ ನಡೆದು ಹೋಗಿದ್ದ.



**ಅರವಿಂದ ಜಿ. ಜೋಷಿ**

## ಅಪ್ರಿಯ ಹೋಲಿಕೆ!'

ಸೊಸೆ ರೋದಿಸುತ್ತಲೇ ಮನೆಗೆ ಬಂದಳು.
ಗಾಬರಿಗೊಂಡ ಅತ್ತೆ ಕಾರಣ ಕೇಳಿದಳು.
'ಯಾಕಮ್ಮಾ, ಅಳ್ತಿದ್ದೀ... ಏನಾಯ್ತು?'
'ಅತ್ತೆ ನಾನು ತಾಟಕೀ ತರಹ ಇದ್ದೀನಾ?
'ಛೇ! ಯಾರು ಹೇಳಿದ್ದು?'
'ಮತ್ತೆ ನನ್ನ ಕಣ್ಣು ಕಪ್ಪೆಯಂತೆ ಹೊರಗೆ ಚಾಚಿದ್ಯಾ?'
'ಖಂಡಿತಾ ಇಲ್ಲ'
'ನನ್ನ ಮೂಗು ದೊಣ್ಣೆ ಮೆಣಸಿನಕಾಯಿ ತರಹ ಗುಂಡಾಗಿದ್ಯಾ?'
'ಇಲ್ವೇ ಇಲ್ಲ...'
'ಮತ್ತೆ ನಾ ಏನಾದ್ರೂ ಎಮ್ಮೆಯಂತೆ ಕಪ್ಪಗೆ, ದಪ್ಪ ಇದ್ದೀನಾ?'
'ಇಲ್ಲಮ್ಮಾ, ಯಾರು ಹಾಗಂದದ್ದು?'
'ಮತ್ಯಾಕೆ ನಮ್ಮ ಓಣಿಯವರೆಲ್ಲಾ ಹಾಗ್ಹೇಳೋದು... ನೀನು ನಿಮ್ಮತ್ತೆ ಥರಾನೇ ಇದ್ದೀ ಅಂತ...!' ಇದೀಗ ಅತ್ತೆ ಮೂರ್ಛೆ ಹೋಗಿದ್ದಾಳೆ!



**ಲತಾ ಹೆಗಡೆ**